**ಪಿಡಬ್ಲ್ಯೂ.1: ಎನ್. ಗೌತಮ್ ಕನುಂಗ.,**

**<u>ದಿನಾಂಕಃ 15.03.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

**14.** ಈ ಹಿಂದೆ ನಿಮ್ಮ ಆ್ಯಕ್ಸಿಸ್ ಬ್ಯಾಂಕ್ ಅಕೌಂಟ್ ಸ್ಟೇಟ್‌ಮೆಂಟನ್ನು ಹಾಜರುಪಡಿಸುತ್ತೇನೆ ಎಂದು ಸಾಕ್ಷಿ ನುಡಿದಿದ್ದು ಇದುವರೆಗು ನೀವು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಮುಂದಿನ ದಿನಾಂಕದಂದು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಟ್ಟು 22 ಇನ್ವಾಯ್ಸ್ ಗಳನ್ನು ತೋರಿಸಲಾಗಿ ಅವುಗಳು ನಮ್ಮ ಕಂಪನಿಯ ಇನ್ವಾಯ್ಸ್ ಗಳಾಗಿರುತ್ತವೆ ಎಂದು ಒಪ್ಪಿಕೊಂಡ ಮೇರೆಗೆ ಸದರಿ ದಾಖಲೆಗಳನ್ನು ಒಟ್ಟಾಗಿ **<u>ನಿ.ಡಿ.3</u>** ಎಂದು ಗುರುತಿಸಲಾಯಿತು.

**15.** ನಿ.ಡಿ.3 ರಂತೆ ನಾನು ಆರೋಪಿತರಿಗೆ ಸರಕುಗಳನ್ನು ಸರಬರಾಜು ಮಾಡಿರುತ್ತೇನೆ. ನಿ.ಡಿ.3 ರ ಇನ್ವಾಯ್ಸನ್ನು ನಿಮ್ಮ ಲೆಡ್ಜರ್ ಅಕೌಂಟಿನಲ್ಲಿ ನಮೂದಿಸಿಕೊಂಡಿದ್ದೀರಾ ಎಂದರೆ ಸಾಕ್ಷಿಯು ನಮೂದಿಸಿರುತ್ತೇನೆ ಎಂದು ನುಡಿಯುತ್ತಾರೆ. ನೀವು ಹಾಜರುಪಡಿಸಿರುವ ನಿ.ಪಿ.20 ರ ಲೆಡ್ಜರ್ ಅಕೌಂಟ್ ಸ್ಟೇಟ್‌ಮೆಂಟಿನಲ್ಲಿ ನಿ.ಡಿ.3 ರ ಬಗ್ಗೆ ನಮೂದಿಸಿದ್ದೀರಾ ಎಂದರೆ ಸಾಕ್ಷಿಯು ನಮೂದಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ರನ್ನಿಂಗ್ ಬಿಸಿನೆಸ್ ಅಕೌಂಟನ್ನು ಮುಂದಿನ ದಿನಗಳಲ್ಲಿ ನ್ಯಾಯಾಲಯಕ್ಕೆ ಹಾಜರುಪಡಿಸಲು ಸಾಧ್ಯವೇ ಎಂದರೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ನಿ.ಡಿ.3 ರ ಇನ್ವಾಯ್ಸ್ ನ ಹಣ ನನಗೆ ತಲುಪಿರುತ್ತದೆ. ನಿ.ಡಿ.3 ರ ಇನ್ವಾಯ್ಸ್ ಗಳನ್ನು ಹೊರತುಪಡಿಸಿ ಆರೋಪಿಯ ಜೊತೆ ಬೇರೆ ವ್ಯವಹಾರ ಮಾಡಿರುವುದಿಲ್ಲ. ನಿ.ಡಿ.3 ರಂತೆ 22 ಇನ್ವಾಯ್ಸ್ ಗಳ ಮೊತ್ತವು ನಿಮಗೆ ತಲುಪಿರುತ್ತದೆ ಎಂದರೆ ಸರಿಯಲ್ಲ. ಯಾವ ಯಾವ ದಿನಾಂಕಗಳ ಇನ್ವಾಯ್ಸ್ ಸಂಬಂಧಿಸಿದಂತೆ ಹಣ ಬಾಕಿ ಇದೆ ಎಂದರೆ ಸಾಕ್ಷಿಯು ಆರೋಪಿಯು ಬಿಲ್ ಪ್ರಕಾರ ಹಣ ನೀಡುತ್ತಿರಲಿಲ್ಲ, 2 ಲಕ್ಷ ಮತ್ತು ಒಂದು ಲಕ್ಷ ಹಣ ಪಾವತಿ ಮಾಡುತ್ತಿದ್ದ ಕಾರಣ ಅವರು ಯಾವ ಬಿಲ್ಲಿಗೆ ನಿರ್ದಿಷ್ಟವಾಗಿ ಪಾವತಿ ಮಾಡಿದ್ದಾರೆ ಎಂದು ದಾಖಲೆಗಳನ್ನು

ನೋಡದೇ ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ. ಜನವರಿ 2022 ನೇ ಇಸವಿಯವರೆಗೆ ಆರೋಪಿ ಎಷ್ಟು ಹಣ ಕೊಡಬೇಕಾಗಿತ್ತು ಎಂದರೆ ಸಾಕ್ಷಿಯು ದಾಖಲೆಗಳನ್ನು ನೋಡದೆ ನನಗೆ ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ. ಇಂದಿನವರೆಗೆ ಆರೋಪಿ ನನಗೆ ರೂ.10,09,787/- ಗಳು ಬಾಕಿ ನೀಡಬೇಕಾಗಿರುತ್ತದೆ. ಈ ಮೇಲ್ಕಂಡ ಮೊತ್ತವು ಎಷ್ಟು ಇನ್ವಾಯ್ಸ್‌ಗಳಿಗೆ ಸಂಬಂಧಿಸಿದ ಮೊತ್ತವಾಗಿರುತ್ತದೆ ಎಂದರೆ ಸಾಕ್ಷಿಯು ಆರೋಪಿಯು ರೌಂಡ್ ಅಪ್ ಮೊತ್ತದಲ್ಲಿ ಅಂದರೆ ಎರಡು ಲಕ್ಷ ಒಂದು ಲಕ್ಷ ಪಾವತಿ ಮಾಡುತ್ತಿದ್ದರು ಯಾವ ಇನ್ವಾಯ್ಸ್ ಗೆ ಸಂಬಂಧಿಸಿದಂತೆ ಹಣ ಪಾವತಿ ಮಾಡುತ್ತಿದ್ದರು ಎಂದು ಅವರು ನಿರ್ದಿಷ್ಟವಾಗಿ ತಿಳಿಸುತ್ತಿರಲಿಲ್ಲ ಒಟ್ಟಾಗಿ ಅವರು ಬಾಕಿ ಉಳಿದ ಮೊತ್ತಕ್ಕೆ ಹಣ ಪಾವತಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನಾನು ಸಾಲದ ಮೇಲೆ ವ್ಯವಹಾರ ಮಾಡುತ್ತಿದ್ದೆನು. ನಾವು ಗ್ರಾಹಕರಿಗೆ ಸರಕುಗಳನ್ನು ಸಾಲದ ಮೇಲೆ ಸರಬರಾಜು ಮಾಡುತ್ತಿದ್ದೆನು. ಗ್ರಾಹಕರು ಸರಕುಗಳನ್ನು ಸರಬರಾಜು ಮಾಡಿದ 31 ರಿಂದ 45 ದಿನಗಳವರೆಗೆ ಹಣ ಮರುಪಾವತಿ ಮಾಡಬೇಕಾಗಿತ್ತು.

**16.** ನಾನು ಕ್ರೆಡಿಟ್ ಬೇಸಿಸ್ ಮೇಲೆ ವ್ಯವಹಾರ ಮಾಡುತ್ತಿದ್ದೇನೆ ಎಂದು ನೋಟೀಸು ಮತ್ತು ಪಿರ್ಯಾದಿನಲ್ಲಿ ನಮೂದಿಸಿದ್ದೀರಾ ಎಂದರೆ ನಮೂದಿಸಿದ್ದೇನೆ ಎಂದು ನುಡಿಯುತ್ತಾರೆ. ನೋಟೀಸು ಹಾಗೂ ಪಿರ್ಯಾದಿನಲ್ಲಿರುವ ಅಂಶಗಳು ನನಗೆ ಗೊತ್ತಿದೆ. ಆ ರೀತಿ ನಮೂದಾಗದಿದ್ದರೂ ನೀವು ಆ ರೀತಿ ಸುಳ್ಳು ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ಸಾಲದ ಆಧಾರದ ಮೇಲೆ ಸರಕು ಸರಬರಾಜು ಮಾಡಿರುವ ಬಗ್ಗೆ ನನ್ನ ಹಾಗೂ ಆರೋಪಿತರ ನಡುವೆ ಯಾವುದೇ ಲಿಖಿತ ಕರಾರು ಆಗಿರುವುದಿಲ್ಲ. ನಿ.ಡಿ.3 ರ ಇನ್ವಾಯ್ಸ್ ನಲ್ಲಿ ಷರತ್ತಿನ ಕಾಲಂ ನಲ್ಲಿ 30 ಅಥವಾ 45 ದಿನಗಳೊಳಗೆ ಹಣವನ್ನು ಮರುಪಾವತಿ ಮಾಡಬೇಕು ತಪ್ಪಿದ್ದಲ್ಲಿ ಅದಕ್ಕೆ ಬಡ್ಡಿ ನೀಡಬೇಕು ಎಂದು ನಮೂದಿಸಿರುತ್ತೇವೆ. ನಿ.ಡಿ.3 ರಲ್ಲಿ 30 ಅಥವಾ 45 ದಿನಗಳೊಳಗೆ ಹಣವನ್ನು ಮರುಪಾವತಿ ಮಾಡಬೇಕು ಎಂದು ನಮೂದಾಗಿರುವುದಿಲ್ಲ ಎಂದರೆ ಸಾಕ್ಷಿಯು ಆ

ರೀತಿ ನಮೂದಾಗಿಲ್ಲ ನಿಗದಿತ ಅವಧಿಯೊಳಗೆ ಹಣವನ್ನು ಪಾವತಿ ಮಾಡದಿದ್ದಲ್ಲಿ ಬಡ್ಡಿ ನೀಡಬೇಕು ಎಂದು ನಮೂದಾಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಆರೋಪಿತರಿಗೆ ಸರಕುಗಳನ್ನು ಸರಬರಾಜು ಮಾಡಿರುತ್ತೇನೆ. ಆರೋಪಿತರಿಗೆ ಸರಬರಾಜು ಮಾಡಿದಂತಹ ಸರಕುಗಳನ್ನು ಎಂದಿಗೂ ಸಹ ನಾನು ಹಿಂಪಡೆದುಕೊಂಡಿರುವುದಿಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಆ ದಾಖಲೆಯಲ್ಲಿ ನಮೂದಿಸಿರುವ ಆರೋಪಿಯ ವಿಳಾಸ ಹಾಗೂ ನಮ್ಮ ವಿಳಾಸ ಸರಿಯಾಗಿರುತ್ತದೆ ಹಾಗೂ ಅದಲ್ಲಿರುವ ಜಿಎಸ್‌ಟಿ ನಂಬರ್ ನಮ್ಮದಾಗಿರುತ್ತದೆ ಎಂದು ಒಪ್ಪಿಕೊಂಡ ಮೇರೆಗೆ ಸದರಿ ದಾಖಲೆಯನ್ನು **ನಿ.ಡಿ.4** ಎಂದು ಗುರುತಿಸಲಾಯಿತು. ನಿ.ಡಿ.4 ರಲ್ಲಿ ನಮೂದಿಸಿರುವ ಸರಕುಗಳನ್ನು ಆರೋಪಿ ಕಂಪನಿಯಿಂದ ನೀವು ಖರೀದಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ನಿ.ಡಿ.4 ರಂತೆ ಆರೋಪಿಯಿಂದ ಸರಕುಗಳನ್ನು ಖರೀದಿಸಿರುವ ಬಗ್ಗೆ ರಿಷಬ್ ಎಂಟರ್‌ಪ್ರೈಸಸ್ ಮಾಲೀಕರಿಗೆ ತಿಳಿದಿರುತ್ತದೆ ಎಂದರೆ ಸರಿಯಲ್ಲ. ಆರೋಪಿತರು ಪಿರ್ಯಾದುದಾರರ ಸಂಸ್ಥೆಯ ಮಾಲೀಕರಾದ ಶಾಂತಿ ದೇವಿ ಕಾನುಂಗ ರವರ ಜೊತೆ ವ್ಯವಹರಿಸಿದ್ದು ನಿಮ್ಮ ಜೊತೆ ವ್ಯವಹರಿಸಿಲ್ಲ ಎಂದರೆ ಸರಿಯಲ್ಲ. ಅವರ ಮಾಹಿತಿಯ ಮೇರೆಗೆ ರಿಷಬ್ ಎಂಟರ್‌ಪ್ರೈಸಸ್ ನಲ್ಲಿ ವ್ಯವಹರಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಕಂಪನಿಯು ನನ್ನ ಹೆಂಡತಿಯ ಹೆಸರಿನಲ್ಲಿದ್ದು,ನಾನೇ ಎಲ್ಲಾ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದೇನೆ.

**17.** ವಿನೋದ್ ಎಂಬ ಹೆಸರಿನವರು ನಮ್ಮ ಕಂಪನಿಯಲ್ಲಿ ಯಾರು ಕೆಲಸ ಮಾಡುತ್ತಿಲ್ಲ. ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಲಾಗಿ ಅದರಲ್ಲಿ ತನ್ನನ್ನು ತಾನು ನೋಡಿ ಗುರುತಿಸಿದ್ದು ಸದರಿ ಪೋಟೋವನ್ನು **ನಿ.ಡಿ.5** ಎಂದು ಗುರುತಿಸಲಾಯಿತು. ನಿ.ಡಿ.5 ರಲ್ಲಿ ಕಾಣುವ ವಾಹನ ಸಂಖ್ಯೆ ಕೆಎ-02-ಎಡಿ-7813 ಆಗಿರುತ್ತದೆ ಎಂದರೆ ಸಾಕ್ಷಿಯು ನಿ.ಡಿ.5 ರಲ್ಲಿ ವಾಹನದ ಸಂಖ್ಯೆ ಕಾಣಿಸುತ್ತಿಲ್ಲ ಎಂದು ನುಡಿಯುತ್ತಾರೆ. ನಿ.ಡಿ.5 ರಂತೆ ಕಾಣುವ ಟಂಪೋದಲ್ಲಿ ನಿ.ಡಿ.4 ರಲ್ಲಿ ನಮೂದಿಸಿರುವ ಇನ್ವಾಯ್ಸ್‌ಗಳಲ್ಲಿನ ಸರಕುಗಳನ್ನು ತೆಗೆದುಕೊಂಡು ಹೋಗುವ

ದೃಶ್ಯವಾಗಿರುತ್ತದೆ ಎಂದರೆ ಸರಿಯಲ್ಲ. ನಿ.ಡಿ.4 ರಲ್ಲಿ ವಾಹನ ಸಂಖ್ಯೆ ಕೆಎ-02-ಎಡಿ-7813 ಎಂದು ನಮೂದಿಸಿರುತ್ತಾರೆ ಎಂದರೆ ಸರಿ.

**18.** ನಿ.ಪಿ.20 ರ ಪ್ರಕಾರ ನಿಮಗೆ ಆರೋಪಿಯಿಂದ ಎಷ್ಟು ಹಣ ಪಾವತಿಯಾಗಿರುತ್ತದೆ ಎಂದರೆ ಸಾಕ್ಷಿಯು ನನಗೆ ದಾಖಲೆಗಳನ್ನು ನೋಡದೆ ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ. ನಾನು ನಗದು ಮುಖಾಂತರ ವ್ಯವಹರಿಸುವುದಿಲ್ಲ, ಎಲ್ಲವನ್ನು ಬ್ಯಾಂಕ್ ಮುಖಾಂತರ ವ್ಯವಹರಿಸುತ್ತೇನೆ. 2002 ರಿಂದ 2023 ರವರೆಗೆ ರಿಷಬ್ ಎಂಟರ್‌ಪ್ರೈಸಸ್ ನಲ್ಲಿ ಯಾವುದೇ ಗ್ರಾಹಕರ ಜೊತೆ ನಗದು ವ್ಯವಹಾರ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಆರೋಪಿಯ ಜೊತೆ ಹೊರತುಪಡಿಸಿ ಬೇರೆ ಗ್ರಾಹಕರ ಜೊತೆ ವ್ಯವಹರಿಸುತ್ತೇನೆ ಎಂದು ನುಡಿಯುತ್ತಾರೆ. ಪಿರ್ಯಾದುದಾರರ ಕಂಪನಿಯು ಆರೋಪಿತರ ಕಂಪನಿಯಿಂದ ದಿ.07.01.2023 ರಂದು ರೂ.1,08,260/- ಗಳ ನಗದನ್ನು ಸ್ವೀಕರಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರ ಕಂಪನಿಯ ಜೊತೆಯಲ್ಲಿಯೂ ಸಹ ನೀವು ನಗದು ಮೂಲಕ ವ್ಯವಹಾರ ಮಾಡಿರುತ್ತೀರಿ ಎಂದರೆ ಸರಿಯಲ್ಲ. ದಿ.19.01.2022 ರಲ್ಲಿ ಆರೋಪಿ ಕಂಪನಿಯಿಂದ ನಿಮ್ಮ ಕಂಪನಿಗೆ ರೂ.2,14,076/- ಹಣ ವರ್ಗಾವಣೆಯಾಗಿರುತ್ತದೆ ಎಂದರೆ ಸಾಕ್ಷಿಯು ಅದು ಹಳೆಯ ವರ್ಷದ ವ್ಯವಹಾರವಾಗಿದ್ದು, 2022 ನೇ ಇಸವಿಗೆ ಸಂಬಂಧಿಸಿದಂತೆ ನಾನು ಪ್ರಕರಣ ದಾಖಲಿಸಿರುತ್ತೇನೆ ಆ ಕಾರಣ ಹಳೆಯ ವ್ಯವಹಾರದ ಬಗ್ಗೆ ನನಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ನಿ.ಪಿ.20 ರಲ್ಲಿ 2022 ರ ಹಳೆಯ ವ್ಯವಹಾರಗಳನ್ನು ಸಹ ನಮೂದಿಸಿಕೊಂಡಿರುತ್ತೀರಿ ಎಂದರೆ ಸರಿ. ಹಳೆಯ ಮತ್ತು ಹೊಸ ವ್ಯವಹಾರಕ್ಕೆ ಸಂಬಂಧಿಸಿದಂತೆ ಸದರಿ ಪ್ರಕರಣ ಹೂಡಿರುತ್ತೀರಿ ಎಂದರೆ ಸಾಕ್ಷಿಯು ನಾನು ದಾಖಲೆಗಳನ್ನು ನೋಡಿ 2022 ರ ಬಾಕಿ ಹಣಕ್ಕಾಗಿ ಮಾತ್ರ ಪ್ರಕರಣ ದಾಖಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿ ಹಳೆ ಮತ್ತು ಹೊಸ ವ್ಯವಹಾರಗಳಿಗೆ ಸಂಬಂಧಿಸಿದಂತೆ ಸಂಪೂರ್ಣ ಹಣ ಮರುಪಾವತಿಸಿದ್ದರೂ ಸಹ

ನೀವು ಸುಳ್ಳು ಪ್ರಕರಣ ದಾಖಲಿಸಿದ್ದೀರಾ ಎಂದರೆ ಸರಿಯಲ್ಲ. ದಿ.24.04.2022 ರಂದು ಆರೋಪಿ ಕಂಪನಿಯಿಂದ ನಿಮ್ಮ ಕಂಪನಿಯ ಖಾತೆಗೆ 50 ಸಾವಿರ ರೂ. ವರ್ಗಾವಣೆಯಾಗಿದೆ ಎಂದರೆ ಸಾಕ್ಷಿಯು ದಾಖಲೆಗಳನ್ನು ನೋಡದೆ ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ. ದಿ.26.02.2022 ರಂದು ಆರೋಪಿ ಕಂಪನಿಯಿಂದ ನಿಮ್ಮ ಕಂಪನಿಯ ಖಾತೆಗೆ 50 ಸಾವಿರ ರೂ. ವರ್ಗಾವಣೆಯಾಗಿದೆ ಎಂದರೆ ಸಾಕ್ಷಿಯು ದಾಖಲೆಗಳನ್ನು ನೋಡದೆ ಹೇಳಲಾಗುವುದಿಲ್ಲ ಎಂದು ನುಡಿಯುತ್ತಾರೆ. ದಿ.01.03.2022 ರಂದು ರೂ.1,34,900/-, ದಿ.16.03.2022 ರಂದು ಒಂದು ಲಕ್ಷ, 23.03.2022 ರಂದು 75 ಸಾವಿರ, 07.04.2022 ರಂದು 4 ಲಕ್ಷ, 08.04.2022 ರಂದು ರೂ.1,88,578/-, ದಿ.25.04.2022 ರಂದು ಒಂದು ಲಕ್ಷ, 10.05.2022 ರಂದು ಒಂದು ಲಕ್ಷ, 09.06.2022 ರಂದು ರೂ.1,75,000/-, 16.07.2022 ರಂದು 4 ಲಕ್ಷ, 28.10.2022 ರಂದು 3 ಲಕ್ಷ, 16.01.2023 ರಂದು 2 ಲಕ್ಷ, 03.05.2023 ರಂದು 2 ಲಕ್ಷ ರೂ.ಗಳು ನಿಮ್ಮ ಖಾತೆಗೆ ವರ್ಗಾವಣೆಯಾಗಿರುತ್ತದೆ ಎಂದರೆ ಸರಿಯಲ್ಲ.

**19.** ನಿ.ಪಿ.1 ಮತ್ತು 2 ರಂತೆ ಚೆಕ್ಕುಗಳನ್ನು ಆರೋಪಿ ಮತ್ತು ಆಕೆಯ ಗಂಡ ನನಗೆ ನೀಡಿದ್ದರು. ಆರೋಪಿ ನಿಮಗೆ ಯಾವಾಗ ವಿವಾದಿತ ಚೆಕ್ಕುಗಳನ್ನು ನೀಡಿದ್ದರು ಎಂದರೆ ಸಾಕ್ಷಿಯು ಯಾವಾಗ ನೀಡಿದ್ದರು ಎಂದು ನಿರ್ದಿಷ್ಟ ದಿನಾಂಕ ಹೇಳಲಾಗುವುದಿಲ್ಲ, ಆದರೆ ಹಣದ ಪಾವತಿಗಾಗಿ ಚೆಕ್ಕು ನೀಡಿದ್ದ ಕಾರಣ ನಾನು ಅದನ್ನು ಬ್ಯಾಂಕಿಗೆ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ನಿ.ಪಿ.1 ಮತ್ತು 2 ರಲ್ಲಿನ ಬರವಣಿಗೆ ಆರೋಪಿ ಮಾಡಿರುತ್ತಾರೆ. ಆರೋಪಿ ವಿವಾದಿತ ಚೆಕ್ಕುಗಳನ್ನು 2023 ರಲ್ಲಿ ನೀಡಿರುತ್ತಾರೆ. 2023 ನೇ ಇಸವಿಯಲ್ಲಿಯೇ ವಿವಾದಿತ ಚೆಕ್ಕುಗಳನ್ನು ಬ್ಯಾಂಕಿಗೆ ಹಾಜರುಪಡಿಸಿದ್ದೇನೆ. 2022 ರಲ್ಲಿ ನೀವು ವಿವಾದಿತ ಚೆಕ್ಕುಗಳನ್ನು

**ಪಿಡಬ್ಲೂ.1: ಎನ್. ಗೌತಮ್ ಕನುಂಗ.,**

ಬ್ಯಾಂಕಿಗೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಆರೋಪಿಗೆ ಚೆಕ್ಕುಗಳನ್ನು 2023 ರಲ್ಲಿ ನೀಡಿದ್ದು 2023 ರಲ್ಲಿ ಬ್ಯಾಂಕಿಗೆ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಅಲಿಸಿ ನೀಡಲಾಯಿತು.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.